ನೋಡಿದವಳಿಗೆ, 'ಅಲ್ಲ, ನನಗನಿಸುತ್ತೆ... ನಾವ್ಯೊಂದು ಗಟ್ಟಿ ನಿರ್ಧಾರಕ್ಕೆ ಬಂದರೆ ಹೇಗೆ ಅಂತಾ? ಬೇಕಿದ್ರೆ ರಿಜಿಸ್ಟ್ರಾರ್ ಆಫೀಸಲ್ಲೆ...' ಅವಳ ಮುಖಭಾವ ನೋಡಿ ಅಷ್ಟಕ್ಕೇ ನಿಲ್ಲಿಸಿದ. 'ಧನಂಜಯ್... ಇಂತಾ ನಿರ್ಧಾರಕ್ಕೆ ಬರೋವಷ್ಟು ಏನು ಇಂಪ್ರೆಸ್ ಮಾಡಿದಿಯ ನನ್ನನ್ನ... ಹಾಂ? ಹೌದೂ... ಬೀನಾ ನಿನ್ನನ್ನ ಕಳಚಿಕೊಂಡದ್ದು ಯಾಕೇಂತ ಕೊನೆಗೂ ಹೇಳಲಿಲ್ಲ ನೀನು!...' ಮೂಲಕ್ಕೆ ತಾಗಿ ಕೆರಳಿದ ಕೋಪಕ್ಕೆ ರಭಸದಿಂದ ಕೈಯೆತ್ತಿದವ, ಏನು ಮಾಡ್ತೀಯ ನೋಡೇಬಿಡತೀನಿ ಅನ್ನುವಂತೆ ಸೆಟೆದು ನಿಂತವಳ ಸ್ಥೈರ್ಯಕ್ಕೆ ತಟಸ್ಥನಾದ. ರಾತ್ರಿ ಅವಳು ಹಾಲಿನಲ್ಲಿ ಮಲಗಿದಳು.

ಬೆಳಿಗ್ಗೆ ತಿಂಡಿ ಕಾಫಿ ಮೌನದಲ್ಲಿ ಮುಗಿಯಿತು. ಸಂಜೆ ಆಫೀಸಿಂದ ಬಂದವಳು ಅವಳೇ ಮಾತು ತೆಗೆದಳು : 'ನಾನು ಪೀಜಿಯಲ್ಲಿ ವ್ಯವಸ್ಥೆ ಮಾಡ್ಕೊಂಡಿದೀನಿ, ನಾಳೆ ಹೋಗ್ತಿದೀನಿ' ಆಗಲೇ ಹಳಹಳಿಸುತ್ತಿದ್ದವ ಹತಾಶನಾಗಿ, 'ನನ್ನಿಂದ ತಪ್ಪಾಗ್ತಿರೋದು ಹೌದು ವಲ್ಲರಿ, ಇನ್ನೆಂದೂ ಹಾಗಾಗಲ್ಲ...' ದನಿಯಲ್ಲಿ ಪ್ರಾಮಾಣಿಕತೆಯಿತ್ತು. ಅವಳು ಶಾಂತವಾಗಿ ಅಂದಳು: 'ಧನಂಜಯ್, ಇದು ತಪ್ಪಾಗೋದು ಅದನ್ನು ಕ್ಷಮಿಸೋದು ಅಷ್ಟೇ ಮಾತಾಗಿದ್ದರೆ ಬೇರೆಯಿತ್ತು. ನೀನು ಅಸುರಕ್ಷತೆಯನ್ನು ಅನುಭವಿಸ್ತಿದೀಯ. ಹೀಗಾದ್ರೂ ನನ್ನನ್ನ ಕಟ್ಟಿಹಾಕಬಹುದು ಅನ್ನೋ ಮನಃಸ್ಥಿತೀಲಿ ಈ ಮದುವೆ ಪ್ರಪೋಸ್ ಮಾಡತಿದೀಯ ಹೊರತು ಒಂದು ಪ್ರೀತಿ ಮೂಲದ್ದಲ್ಲ ಅದು. ನಿಂಗೆ ನೀನೆ ಮೋಸ ಮಾಡ್ಕೋತಿದೀಯ. ನನ್ನ ಪೂರ್ವ ಜೀವನದ ಸಂಗತಿಗಳೇ ಉರಳಾಗಿ ಹಿಂಸಿಸ್ತವೆ ಆಮೇಲೆ. ಇದಿಲ್ಲಿಗೆ ಸಾಕು.'

ಶಬ್ದದ ಹುಟ್ಟಿಗೆ ಅಡ್ಡಿಯಾಗುವಂತೆ ಅಲ್ಲೆಲ್ಲ ಮೌನ ಸ್ಥಾಪನೆಗೊಳ್ಳಲು ಹವಣಿಸುವಂತಿತ್ತು.

## ಬನವಾಸಿ ವೆಂಕಟೇಶ ದೀಕ್ಷಿತ್

ಉತ್ತರಕನ್ನಡ ಜಿಲ್ಲೆಯ ಬನವಾಸಿಯವರಾದ ವೆಂಕಟೇಶ ದೀಕ್ಷಿತ್, ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಬೆಂಗಳೆ ಮತ್ತು ಶಿರಸಿಯಲ್ಲಿ ವಿದ್ಯಾಭ್ಯಾಸ.

ಬಿ.ಎಸ್ಸಿ. ಪದವಿ ಪಡೆದಿರುವ ಅವರ ವೃತ್ತಿಜೀವನದ ಆರಂಭ ಅಂಚೆ ಇಲಾಖೆಯಲ್ಲಿ, ಕಲಬುರ್ಗಿಯಲ್ಲಿ. ಅಲ್ಲಿಂದ ಭಾರತೀಯ ಸೇನೆಯಲ್ಲಿ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಕಿರಿಯ ಲೇಖಾಧಿಕಾರಿಯಾಗಿ, ಮುಖ್ಯ ಲೆಕ್ಕಾಧಿಕಾರಿಯಾಗಿ, ಉಪಮಹಾಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕರ ಪ್ರಕಟಿತ ಕಥಾಸಂಕಲನ 'ಕಾವಡಿ'.